ಕುಡಿಯುವ ನೀರಿನ ಸಮಸ್ಯೆ ತೀವ್ರ!

ಪೈಪ್‌ಲೈನ್ ಸ್ಥಳಾಂತರ ಕಾಮಗಾರಿ ಹಿನ್ನೆಲೆ ನೀರು ಸರಬರಾಜು ಸ್ಥಗಿತ

• **ಮಲ್ಲಿಕಾರ್ಜುನ ಪಟ್ಟಣಶೆಟ್ಟಿ**
ಕನ್ನಡಪ್ರಭ ವಾರ್ತೆ ದೇವರಹಿಪ್ಪರಗಿ

ಪಟ್ಟಣ ಸೇರಿದಂತೆ ಸುತ್ತ-ಮುತ್ತಲಿನ ಗ್ರಾಮಗಳಲ್ಲಿ ಕಡ್ಲೆವಾಡ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಪೈಪ್‌ಲೈನ್ ಕಾಮಗಾರಿ ಹಿನ್ನೆಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರಗೊಳ್ಳುವ ಸಾಧ್ಯತೆ ಎದುರಾಗಿದೆ.

ಚಾಂದಕವಠೆ ಗ್ರಾಮದ ಸಮೀಪದ ಜಾಕ್‌ವೆಲ್ ನಿಂದ ನೀರು ಪೂರೈಸುವ ರೈಸಿಂಗ್ ಮೇನ್ ಪೈಪ್ ಲೈನ್ ಹಾದುಹೋಗುವ ಸ್ಥಳದಲ್ಲಿ ಅಡ್ಡರಸ್ತೆ ಸೇತುವೆ ಕಾಮಗಾರಿ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಪೈಪ್ ಲೈನ್‌ಗಳನ್ನು ಸ್ಥಳಾಂತರಿಸುವ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಬರುವಂತ ಬೇಸಿಗೆ ಕಾಲದ ಮುನ್ನೆಚ್ಚರಿಕೆ ಕ್ರಮವಾಗಿ ನೀರು ಸರಬರಾಜನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಇದರಿಂದ ದೇವರಹಿಪ್ಪರಗಿ ಪಟ್ಟಣ ಸೇರಿದಂತೆ ಸುತ್ತ-ಮುತ್ತಲಿನ ಗ್ರಾಮಗಳ ಜನರಿಗೆ ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಕಾಮಗಾರಿ ಪೂರ್ಣಗೊಳ್ಳುವವರೆಗೆ ಸಾರ್ವಜನಿಕರು ಸಹಕರಿಸಬೇಕು ಎಂದು ಸಂಬಂಧಪಟ್ಟವರು ಮನವಿ ಮಾಡಿದ್ದಾರೆ.

ಸಾರ್ವಜನಿಕರಲ್ಲಿ ಮನವಿ: ಕಡ್ಲೆವಾಡ ಬಹುಹಳ್ಳಿ ಕುಡಿಯುವ ನೀರಿನ ಪೈಪ್‌ಲೈನ್ ಸ್ಥಳಾಂತರ ಕಾಮಗಾರಿ ಪೂರ್ಣಗೊಳ್ಳುವವರೆಗೆ ನೀರನ್ನು ಮಿತವಾಗಿ ಬಳಸಬೇಕು ಹಾಗೂ ಲಭ್ಯವಿರುವ ನೀರನ್ನು ಅನಗತ್ಯವಾಗಿ ವ್ಯರ್ಥ ಮಾಡಬಾರದು ಎಂದು ಸಾರ್ವಜನಿಕರಲ್ಲಿ ವಿನಂತಿಸಲಾಗಿದೆ. ಪಟ್ಟಣದಲ್ಲಿ ಸುಮಾರು 60 ಬೋರವೆಲ್‌ಗಳಲ್ಲಿ 20 ಬೋರವೆಲ್‌ಗಳು ನಿಂತಿದ್ದು, ನೀರಿನ ಸಮಸ್ಯೆ ಇದ್ದಲ್ಲಿ ಈಗಾಗಲೇ 3 ಬೋರವೆಲ್‌ಗಳು ಕೊರಿಸಲಾಗಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿದ್ದಾರೆ.

ಜಾತ್ರೆಗೆ ಬರುವ ಭಕ್ತಾದಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಆಗದಿರಲಿ: ಪಟ್ಟಣದ ಐತಿಹಾಸಿಕ ಶ್ರೀ ಮಲ್ಲಯ್ಯ ರಾವುತರಾಯ ಜಾತ್ರಾ ಮಹೋತ್ಸವ ಪ್ರಾರಂಭವಾಗಿದ್ದು, ಬರುವಂತ ದಿನಗಳಲ್ಲಿ ಲಕ್ಷಾಂತರ ಭಕ್ತಾದಿಗಳು ಪಟ್ಟಣಕ್ಕೆ ಬರಲಿದ್ದು, ಕುಡಿಯುವ ನೀರಿಗಾಗಿ ಹಾಹಾಕಾರ ಉಂಟಾಗಿದೆ. ಆದಷ್ಟು ಬೇಗ ಸಂಬಂಧಪಟ್ಟ ಅಧಿಕಾರಿಗಳು ಕುಡಿಯುವ ನೀರಿಗೆ ಸಮಸ್ಯೆಯಾಗದ ಹಾಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು. ಇಲ್ಲದಿದ್ದರೇ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಮುಖಂಡರುಗಳಾದ ಕಾಸು ಕೋರಿ, ದಿನೇಶಗೌಡ ಪಾಟೀಲ, ಶಿವರಾಜ ತಳವಾರ, ರಹೀಮಾನ್ ಕನಕಲ್, ಸಂಪತ್ ಜಮಾದಾರ, ರಾಘವೇಂದ್ರ ಗುಡಿಮನಿ, ದಯಾನಂದ ರಾಠೋಡ, ಸಿದ್ದನಗೌಡ ಜಲಪೂರ, ಸಂತೋಷ ಕುಲಕರ್ಣಿ, ವಿಜಯಕುಮಾರ ಯಂಬತ್ನಾಳ ಸೇರಿದಂತೆ ಹಲವಾರು ಜನ ಮುಖಂಡರು ಆಗ್ರಹಿಸಿದ್ದಾರೆ.



ಕಡ್ಲೆವಾಡ ಬಹುಹಳ್ಳಿ ಕುಡಿಯುವ ನೀರಿನ ಘಟಕದ ಪೈಪ್‌ಲೈನ್ ಶಿಫ್ಟಿಂಗ್ ಕಾಮಗಾರಿ ದುರಸ್ತಿ ಕಾರ್ಯ ಪ್ರಗತಿಯಲ್ಲಿದೆ. ದೇವರಹಿಪ್ಪರಗಿ ಪಟ್ಟಣ ಸೇರಿದಂತೆ ಸುತ್ತಲಿನ ಗ್ರಾಮಗಳಿಗೆ ಬೇಸಿಗೆಯ ಸಮಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗಬಾರದೆಂದು ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಿ ನೀರು ಪೂರೈಕೆಯನ್ನು ಸುಗಮಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸಾರ್ವಜನಿಕರು ಇಲಾಖೆಯೊಂದಿಗೆ ಸಹಕರಿಸಬೇಕು.
• **ಎಚ್.ಎಂ.ಸಾರವಾಡ** ಎಇ, ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಸಿಂದಗಿ.

ಪಟ್ಟಣ ಸೇರಿದಂತೆ ಸುತ್ತ-ಮುತ್ತಲಿನ ಗ್ರಾಮಗಳ ಸಾರ್ವಜನಿಕರಿಗೆ ಕುಡಿಯುವ ನೀರಿನ ಪೂರೈಕೆಯಲ್ಲಿ ಯಾವುದೇ ತೊಂದರೆ ಉಂಟಾಗದಂತೆ ಅಧಿಕಾರಿಗಳು ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕು. ಪೈಪ್‌ಲೈನ್ ಕಾಮಗಾರಿಯಿಂದ ನೀರು ಸರಬರಾಜಿಗೆ ವ್ಯತ್ಯಯ ಉಂಟಾಗದಂತೆ ಪರ್ಯಾಯ ವ್ಯವಸ್ಥೆ ಕಲ್ಪಿಸಿ, ಸಾರ್ವಜನಿಕರಿಗೆ ನೀರಿನ ಸಮಸ್ಯೆ ಎದುರಾಗದಂತೆ ಸಂಬಂಧಿಸಿದ ಅಧಿಕಾರಿಗಳು ತಕ್ಷಣವೇ ಗಮನಹರಿಸಿ ಕಾರ್ಯನಿರ್ವಹಿಸಬೇಕು.
• **ರಾಜುಗೌಡ ಪಾಟೀಲ ಕುದರಿಸಾಲವಾಡಗಿ** ಶಾಸಕರು ದೇವರಹಿಪ್ಪರಗಿ.

ಪಟ್ಟಣದ ವಿವಿಧ ವಾರ್ಡಗಳಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಪೂರೈಕೆಯಲ್ಲಿ ಯಾವುದೇ ತೊಂದರೆ ಉಂಟಾಗದಂತೆ ಸಿಬ್ಬಂದಿ ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕು. ಚಾಂದಕವಠೆ ಗ್ರಾಮದ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯಿಂದ ಬಹು ಹಳ್ಳಿ ಕುಡಿಯುವ ನೀರಿನ ಯೋಜನೆ ಪೈಪ್‌ಲೈನ್ ಶಿಫ್ಟ್ ಮಾಡಲಾಗಿದೆ. ಕಾಮಗಾರಿಯಿಂದ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗದಂತೆ ಪರ್ಯಾಯ ವ್ಯವಸ್ಥೆ ಕಲ್ಪಿಸಿ, ಸಾರ್ವಜನಿಕರಿಗೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಸಲು ಕ್ರಮ ಕೈಗೊಳ್ಳಬೇಕು. ಸಿಬ್ಬಂದಿ ವರ್ಗ ತಕ್ಷಣವೇ ಗಮನಹರಿಸಿ ಕಾರ್ಯನಿರ್ವಹಿಸಬೇಕು.
• **ಅಪ್ರೋಜ್ ಅಹ್ಮದ್ ಪಟೇಲ** ಪ.ಪಂ ಮುಖ್ಯಾಧಿಕಾರಿ.

ಶಾಸಕ ನಾಡಗೌಡರ ಹುಟ್ಟುಹಬ್ಬದ ಸಂಭ್ರಮ

ಅಭಿಮಾನಿಗಳು ಯುವ ಮುಖಂಡರಿಂದ ಕೇಕ್ ಕತ್ತರಿಸಿ ಅದ್ದೂರಿ ಆಚರಣೆ

• **ಕನ್ನಡಪ್ರಭ ವಾರ್ತೆ** ನಾಲತವಾಡ

ಪಟ್ಟಣದ ಸಾರ್ವಜನಿಕರು ಹಾಗೂ ಅಭಿಮಾನಿಗಳಿಂದ ಮುದ್ದೇಬಿಹಾಳ ಶಾಸಕ ಸಿ.ಎಸ್.ನಾಡಗೌಡ (ಅಪ್ಪಾಜಿ) ಹುಟ್ಟುಹಬ್ಬವನ್ನು ಭಾನುವಾರ ಅದ್ದೂರಿಯಾಗಿ ಆಚರಿಸಲಾಯಿತು.

ಪಟ್ಟಣದ ಬಸವೇಶ್ವರ ವೃತ್ತದ ಬಳಿ ಹುಟ್ಟುಹಬ್ಬದ ಪ್ರಯುಕ್ತ ರಸಮಂಜರಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಶಾಸಕರ ಅನುಪಸ್ಥಿತಿಯಲ್ಲಿ ಅವರ ಪುತ್ರ ಪೃಥ್ವಿರಾಜ್ ನಾಡಗೌಡ ಹಾಗೂ ಯುವ ಮುಖಂಡ ಗುರುಪ್ರಸಾದ ದೇಶಮುಖ ಅವರ ಸಮ್ಮುಖದಲ್ಲಿ ಕೇಕ್ ಕತ್ತರಿಸಿ ಅಭಿಮಾನಿಗಳು ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಗುರುಪ್ರಸಾದ ದೇಶಮುಖ ಮಾತನಾಡಿ, ನಾಡಗೌಡ ಹಾಗೂ ದೇಶಮುಖ ಮನೆತನಗಳಲ್ಲಿ ಸಾಮಾನ್ಯವಾಗಿ ಹುಟ್ಟುಹಬ್ಬ ಆಚರಿಸುವ ಪದ್ಧತಿ ಇಲ್ಲ. ಶಾಸಕರೂ ಇಂತಹ ಕಾರ್ಯಕ್ರಮಗಳಿಂದ ದೂರವಿರುತ್ತಾರೆ. ಆದರೂ ನಾಲತವಾಡದ ಅಭಿಮಾನಿಗಳು ಇಷ್ಟೊಂದು ಅದ್ದೂರಿಯಾಗಿ ಹುಟ್ಟುಹಬ್ಬ ಆಚರಿಸಿ ತಮ್ಮ ಅಭಿಮಾನ ವ್ಯಕ್ತಪಡಿಸಿರುವುದು ಸಂತಸ ತಂದಿದೆ. ಅವರೆಲ್ಲರಿಗೂ ನಾವು ಚಿರಋಣಿಯಾಗಿದ್ದೇವೆ ಎಂದರು.

ಕಾರ್ಯಕ್ರಮದ ರೂವಾರಿ ಸಿದ್ದಣ್ಣ ಕಟ್ಟಿಮನಿ ಮಾತನಾಡಿ, ಶಾಸಕ ಸಿ.ಎಸ್.ನಾಡಗೌಡ ಅವರು ಸದಾ ಅಭಿವೃದ್ಧಿಪರ ಚಿಂತನೆ ಹೊಂದಿರುವ ನಾಯಕರು. ಹಲವು ವರ್ಷಗಳಿಂದ ನಾಡಗೌಡ ಹಾಗೂ ದೇಶಮುಖ ಮನೆತನಗಳು ಈ ಭಾಗದಲ್ಲಿ ಶಾಂತಿಯುತ ಸಮಾಜ ನಿರ್ಮಾಣಕ್ಕೆ ಶ್ರಮಿಸಿವೆ. ಕೆಲ ರಾಜಕಾರಣಿಗಳು ಅವರ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡುವ ಮೂಲಕ ವರ್ಚಸ್ಸಿಗೆ ಧಕ್ಕೆ ತರುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ, ಸುಳ್ಳು ಪ್ರಚಾರದಿಂದ ಈ ಮನೆತನಗಳ ಜನಪ್ರಿಯತೆಯನ್ನು ಕುಗ್ಗಿಸಲು ಸಾಧ್ಯವಿಲ್ಲ ಎಂದರು.

ಸಂಗಮೇಶ ಗಂಗನಗೌಡರ ಮಾತನಾಡಿ, ಅಪ್ಪಾಜಿ ನಾಡಗೌಡ ಧಣಿಗಳು ತಾಲೂಕಿನಾದ್ಯಂತ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಜನರ ಮನದಲ್ಲಿ ನೆಲೆಸಿದ್ದಾರೆ. ಅವರು ಇನ್ನೂ ನೂರಾರು ವರ್ಷ ಆರೋಗ್ಯದಿಂದ ಬಾಳಲಿ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಹಿರಿಯರಾದ ಅಮರಪ್ಪ ಗಂಗನಗೌಡರ, ಶಿವಪ್ಪ ತಾತರೆಡ್ಡಿ, ಗನಿಸಾಬ ಖಾಜಿ, ಮುತ್ತು ಗೊರಬಾಳ, ಅಲ್ಲಾಭಕ್ಷ ಮೂಲಿಮನಿ, ಪಟ್ಟಣ ಪಂಚಾಯತಿ ಉಪಾಧ್ಯಕ್ಷ ಬಸವರಾಜ ಗಂಗನಗೌಡರ, ಸದಸ್ಯರಾದ ಸಂಗಪ್ಪ ಬಾರಡ್ಡಿ, ಬಾಬು ಕ್ಷತ್ರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.





ರಾಜ್ಯಮಟ್ಟದ ಕ್ರಿಕೆಟ್ ಪಂದ್ಯಾವಳಿಗೆ ವಿದ್ಯಾರ್ಥಿಗಳು ಆಯ್ಕೆ

• **ಕನ್ನಡಪ್ರಭ ವಾರ್ತೆ** ವಿಜಯಪುರ

ಜಿಲ್ಲಾ ಪಂಚಾಯತಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಾರ್ಯಾಲಯ ಹಾಗೂ ಸೇಂಟ್ ಜೋಸೆಫ್ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆ ಸಹಯೋಗದಲ್ಲಿ ಜರುಗಿದ 2026-27ನೇ ಸಾಲಿನ 14 ಹಾಗೂ 17 ವರ್ಷದ ವಯೋಮಿತಿಯ ಬಾಲಕ-ಬಾಲಕಿಯರ ಬೆಳಗಾವಿ ವಿಭಾಗ ಮಟ್ಟದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಸೇಂಟ್ ಜೋಸೆಫ್ ಶಾಲೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸಾಧನೆಗೈದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ನಗರದ ಜಿಲ್ಲಾ ಪೊಲೀಸ್ ಮೈದಾನದಲ್ಲಿ ಜರುಗಿದ ಬಾಲಕಿಯರ ಕ್ರಿಕೆಟ್ ಪಂದ್ಯಾವಳಿಯಲ್ಲಿ ಸೇಂಟ್ ಜೋಸೆಫ್ ಶಾಲೆಯ ವಿದ್ಯಾರ್ಥಿನಿಯರಾದ ತನುಶ್ರೀ ಇಜೇರಿ, ಆದ್ಯಾ ಪಾಟೀಲ, ಸಾನ್ವಿ ಆಸಂಗಿ, ಖುಷಿ ಸಿಂಗ್.ಕೆ, ದಿವ್ಯಾ ಹಡಪದ, ಧನುಶ್ರೀ ಜೋಗಿ, ಸನ್ನತಿ ಕುಲಕರ್ಣಿ, ಸಮೃದ್ಧಿ ಬಗಲಿ, ನಿಶಾ ಹಟ್ಟಿ, ಪ್ರತೀಕ್ಷಾ ಮುರಗೋಡ, ಸಾಕ್ಷಿ ಪೂಜಾರಿ, ಭಾಗ್ಯಶ್ರೀ ಬಿರಾದಾರ, ಸಿಂಚನಾ ಕಂಚಗಾರ, ಪಲ್ಲವಿ ತೇಲಿ ತಂಡವು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



ಕ್ರಿಕೆಟ್ ಪಂದ್ಯಾವಳಿಯಲ್ಲಿ ಸೇಂಟ್ ಜೋಸೆಫ್ ಶಾಲೆಯ ವಿದ್ಯಾರ್ಥಿಗಳಾದ ಪ್ರಜ್ವಲ್ ಜಬಗೊಂಡ, ಆಕಾಶ ತಲಕೇರಿ, ಶ್ರೀನಿವಾಸ ಪಂಚಾಕ್ಷರಿ, ಮಲ್ಲಿಕಾರ್ಜುನ ಪೂಜಾರಿ, ಸದಾನಂದಗೌಡ ಬಿರಾದಾರ, ರಾಜು ಕದಮ, ನವಾಜ ಮುಜಾವರ, ರೋಹಿತ ಚಲವಾದಿ, ಸಮರ್ಥ ಬಾಗೇವಾಡಿ, ಸೂರಜ ರಾಠೋಡ, ಉಮರ ಮಂಟೂರ ತಂಡವು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದೆ. ವಿದ್ಯಾರ್ಥಿಗಳ ಸಾಧನೆಗೆ ಸೇಂಟ್ ಜೋಸೆಫ್ ಸಮೂಹ ಶಿಕ್ಷಣ ಸಂಸ್ಥೆಯ ಮುಖ್ಯಸ್ಥೆ ಅನಲೀಸಾ ಬಾಸ್ಕೋ, ಅಧ್ಯಕ್ಷ ಶಾಜು ಜೋಸೆಫ್, ದೈಹಿಕ ಶಿಕ್ಷಣ ಶಿಕ್ಷಕರಾದ ವಿಜಯಕುಮಾರ ಹಳ್ಳದಮನಿ, ಲೋಕೇಶ ಕಾಂಬಳೆ, ಅನಿಲ ತೊರವಿ, ಯಾಸೀನ ಕತ್ನಳ್ಳಿ ಅಭಿನಂದಿಸಿದ್ದಾರೆ.

ನ.15ಕ್ಕೆ ರಾಜ್ಯಮಟ್ಟದ ಸಿರಿಗನ್ನಡ ಸಂಭ್ರಮ

ವಿಜಯಪುರ: ನಗರದ ಕಂದಗಲ್ಲ ಹನುಮಂತರಾಯ ರಂಗಮಂದಿರದಲ್ಲಿ ನ.15ರಂದು ವಿಜಯಪುರದ ಅಮ್ಮ ಫೌಂಡೇಶನ್ ವತಿಯಿಂದ ರಾಜ್ಯ ಮಟ್ಟದ ಸಿರಿಗನ್ನಡ ಸಂಭ್ರಮ ಹಮ್ಮಿಕೊಳ್ಳಲಾಗುತ್ತಿದೆ. ನಾಡು ನುಡಿ ಕುರಿತು ಚಿಂತನಾಗೋಷ್ಠಿ, ಯುವ ಸಾಹಿತಿಗಳ ಎರಡು ಪುಸ್ತಕಗಳು ಬಿಡುಗಡೆ, ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ ಹಾಗೂ ಪ್ರತಿಭಾವಂತರಿಗೆ ಪುರಸ್ಕಾರ ಜರುಗಲಿದೆ. ಕಾರ್ಯಕ್ರಮಕ್ಕೆ ನಾಡಿನ ಶ್ರೇಷ್ಠ ಸ್ವಾಮೀಜಿಗಳು, ಸಾಹಿತ್ಯ ದಿಗ್ಗಜರು, ಕನ್ನಡಪರ ಹೋರಾಟಗಾರರು, ಸಾಹಿತಿಗಳು, ರಾಜಕೀಯ ಪ್ರತಿನಿಧಿಗಳು, ಅಧಿಕಾರಿಗಳು, ಸಮಾಜ ಸುಧಾರಕರು, ವಿವಿಧ ಸಂಘ ಸಂಸ್ಥೆಯ ಪದಾಧಿಕಾರಿಗಳು, ರಾಜ್ಯದ ಮೂಲೆ ಮೂಲೆಗಳಿಂದ ಕನ್ನಡ ಸಾಧಕರು, ಹಿತೈಷಿಗಳು, ಅಭಿಮಾನಿಗಳು ಆಗಮಿಸಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಅಮ್ಮ ಫೌಂಡೇಶನ್ ಸಂಚಾಲಕರು: 9972115502 ಸಂಪರ್ಕಿಸಬಹುದಾಗಿದೆ.



ಅರ್ಜಿ ಸಲ್ಲಿಸಲು QR ಸ್ಕ್ಯಾನ್ ಮಾಡಿರಿ

SBI
ಭಾರತೀಯ ಸ್ಟೇಟ್ ಬ್ಯಾಂಕ್
ಕೇಂದ್ರೀಯ ನೇಮಕಾತಿ ಮತ್ತು ಪದೋನ್ನತಿ ವಿಭಾಗ
ಕಾರ್ಪೊರೇಟ್ ಕೇಂದ್ರ, ಮುಂಬೈ
ದೂರವಾಣಿ: 022-22820427

ಗುತ್ತಿಗೆ ಆಧಾರದ ಮೇಲೆ ಸ್ಪೆಷಲಿಸ್ಟ್ ವರ್ಗದ ಅಧಿಕಾರಿಗಳ ನೇಮಕಾತಿ

ಗುತ್ತಿಗೆ ಆಧಾರದ ಮೇಲೆ ಈ ಕೆಳಗಿನ ಹುದ್ದೆಗಳಿಗೆ ಅರ್ಹ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ಹುದ್ದೆಯ ಹೆಸರು	ಖಾಲಿ ಹುದ್ದೆ	31.07.2026 ರಂತೆ ವಯಸ್ಸು (ವರ್ಷಗಳು)	
ಜಾಹೀರಾತು ನಂ. CRPD/SCO/2026-27/24 (ಗುತ್ತಿಗೆ ಆಧಾರದ ಹುದ್ದೆ)			
		ಕನಿಷ್ಠ	ಗರಿಷ್ಠ
ಡೆಪ್ಯುಟಿ ವೈಸ್ ಪ್ರೆಸಿಡೆಂಟ್ (ಅನಲಿಟಿಕಲ್ ಮಾರ್ಕೆಟಿಂಗ್ ಮತ್ತು ಕ್ಯಾಂಪೇನ್)	1	33	45
ಡೆಪ್ಯುಟಿ ವೈಸ್ ಪ್ರೆಸಿಡೆಂಟ್ (ಡಿಜಿಟಲ್ ಮಾರ್ಕೆಟಿಂಗ್)	2	33	45
ಕಂಟೆಂಟ್ ಸ್ಪೆಶಲಿಸ್ಟ್	1	25	40
ಜಾಹೀರಾತು ನಂ. CRPD/SCO/2026-27/25 (ಗುತ್ತಿಗೆ ಆಧಾರದ ಹುದ್ದೆ)			
ಹೆಡ್ ಸೇಲ್ಸ್	1	40	52
ಸೆಂಟ್ರಲ್ ರಿಸರ್ಚ್ ಟೀಮ್ (ಪ್ರಾಡಕ್ಟ್‌ಲೀಡ್)	2	30	45
ಮ್ಯಾನೇಜರ್ (ಬಿಸಿನೆಸ್ ಪ್ರೊಸೆಸ್)	1	30	40
ಪ್ರಾಜೆಕ್ಟ್‌ಡೆವಲಪ್‌ಮೆಂಟ್ ಮ್ಯಾನೇಜರ್ (ಟೆಕ್ನಾಲಜಿ)	1	25	40
ಸೆಂಟ್ರಲ್ ಆಪರೇಶನ್ಸ್ ಟೀಮ್ (ಸಿಟಿ) ಸಪೋರ್ಟ್	1	30	40

ಅರ್ಹತೆಯ ಮಾನದಂಡಗಳು (ವಯಸ್ಸು, ಅನುಭವ, ಕೆಲಸದ ವಿವರಣೆ ಇತ್ಯಾದಿ), ಖಾಲಿ ಹುದ್ದೆಯ ವಿವರಗಳು, ಆವಶ್ಯಕ ಶುಲ್ಕಗಳು, ಇತರ ವಿವರಗಳು ಮತ್ತು ಆನ್ ಲೈನ್ ನಲ್ಲಿ ಅರ್ಜಿಯನ್ನು ಸಲ್ಲಿಸಲು ಹಾಗೂ ಅರ್ಜಿ ಶುಲ್ಕದ ಆನ್ ಲೈನ್ ಪಾವತಿಗಾಗಿ ಬ್ಯಾಂಕ್ ನ ವೆಬ್ ಸೈಟ್ **https://sbi.bank.in/web/careers/current-openings**ಗೆ ಲಾಗಿನ್ ಮಾಡಿರಿ. ಅರ್ಜಿ ಸಲ್ಲಿಸುವ ಮತ್ತು ಶುಲ್ಕಗಳನ್ನು ಪಾವತಿಸುವ ಮೊದಲು ಅರ್ಹತೆಯನ್ನು ಖಾತ್ರಿಮಾಡಿಕೊಳ್ಳುವು ಮತ್ತು ಇತರ ವಿವರಗಳಿಗಾಗಿ ವಿವರವಾದ ಜಾಹೀರಾತನ್ನು ಉಲ್ಲೇಖಿಸಿರಿ. ಯಾವುದೇ ವಿಚಾರಣೆಗಳಿದ್ದಲ್ಲಿ ದಯಮಾಡಿ ಈ ಲಿಂಕ್ ಮೂಲಕ ನಮಗೆ ಬರೆಯಿರಿ: **"CONTACT US" —> "Post Your Query"** ಇದು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಲಭ್ಯವಿದೆ **(https://sbi.bank.in/web/careers/post-your-query)**.

• **ಆನ್‌ಲೈನ್ ಅರ್ಜಿ ಸಲ್ಲಿಸುವ ಮತ್ತು ಶುಲ್ಕಪಾವತಿಸುವ ದಿನಾಂಕ: 30.09.2026 ರಿಂದ 21.10.2026**

ಸ್ಥಳ: ಮುಂಬೈ
ದಿನಾಂಕ: 30.09.2026
ಪ್ರಧಾನ ವ್ಯವಸ್ಥಾಪಕರು (ಆರ್‌ಪಿ ಮತ್ತು ಪಿಎಮ್)

ಸಾರ್ವಜನಿಕ ನೋಟೀಸು

ನಾನು ಆರ್. ಟಿ. ಬುಲಗೌಡ ವಕೀಲರು, ಅಂಗಡಿ ನಂ. 2 ಪಿ.ಆಯ್. ಶಿರೂರ ಕಾಂಪ್ಲೆಕ್ಸ ಎಸ್.ಎಸ್. ಹಾಯಸ್ಕೂಲ ಹತ್ತೀರ, ಲಿಂಗದ ಗುಡಿ ರಸ್ತೆ, ವಿಜಯಪೂರ, ಸಾರ್ವಜನಿಕರಿಗೆ ಈ ಮೂಲಕ ತಿಳಿಸುವದೇನೆಂದರೆ,

ವಿಜಯಪೂರ ಜಿಲ್ಲಾ ಮತ್ತು ತಾಲೂಕಿನ ಭುತನಾಳ ಗ್ರಾಮದ ಬಿನ್ ಶೇತ್ಕಿ ಜಮೀನ ರಿ.ಸ ನಂ. 144/ಕೆ ಇದರ ಪೈಕಿ ಬರುವ ಪ್ಲಾಟ ಸ್ವತ್ತಿನ ಹಳೆ ಸಂಖ್ಯೆ 189068, ನಿರ್ಧರಣಾ ಸಂಖ್ಯೆ : 144/ಕೆ ಪ್ಲಾಟ ನಂ. 35, ಇ-ಆಸ್ತಿ ನಂ. 4085115717, ಕ್ಷೇತ್ರ ಪು-ಪ : 15 ಮೀ X ಉ-ದ : 9 ಮೀ=135 ಚ. ಮೀ. ಇದನ್ನು ಅದರ ಮಾಲೀಕರಾದ ಈರಣ್ಣ ತಂದೆ. ಮಳಿಯಪ್ಪ ಬದಿಗೇರ ಇವರು ಪಿರ್ಯಾಮಿಲ್ ಫೈನಾನ್ಸ ಲೀ. ವಿಜಯಪೂರ ಇವರಿಂದ ಪಡೆಯುವ ಸಾಲಕ್ಕೆ ವತ್ತೆ ಹಾಕುವವರಿದ್ದು, ಸದರಿ ಆಸ್ತಿಯ ಒಂದನೇ ಖರೀದಿದಾರರಾದ ಸುಭಾಸ ತಂದೆ. ಶಿವಾಜಿ ಮೋರೆ ಇವರ ಹೆಸರಿನಲ್ಲಿ ಆದ ಮೂಲ ಖರೀದಿ ಪತ್ರ ದಸ್ತ ನಂ. 09781/2010-11, ದಿನಾಂಕ : 24-12-2010 ಇದನ್ನು ಮನೆಯಲ್ಲಿ ಇಟ್ಟಿದ್ದು ಹುಡುಕಿದರೆ ಸಿಗುತ್ತಿಲ್ಲಾ ಮತ್ತು ಅದನ್ನು ಯಾವುದೇ ಸಾಲಕ್ಕೆ ಆಧಾರವಾಗಿಟ್ಟಿಲ್ಲ ಅಂತಾ ಮತ್ತು ಆ ಸಂಬಂಧವಾಗಿ ಕರ್ನಾಟಕ ಪೋಲಿಸ ವಿಜಯಪೂರ ಯುನಿಟ ಇವರಲ್ಲಿ ದಿನಾಂಕ 07-10-2026 & 12-10-2026 ರಂದು ದೂರು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಕಾರಣ ಸದರಿ ಖರೀದಿ ಪತ್ರ ಯಾರಲ್ಲಿಯಾದರೂ ಸಾಲಕ್ಕೆ ಆಧಾರವಾಗಿ ಇದ್ದರೇ ಅಥವಾ ಸದರಿ ಆಸ್ತಿಯ ಮೇಲೆ ಯಾರದಾದರೂ ಹಕ್ಕು, ಸತ್ತಾ, ಸ್ವಾಮಿತ್ವ, ಖರೀದಿ ಕರಾರು, ವತ್ತಿ, ಬೋಜಾ, ಕೋರ್ಟ ಕೇಸ್ ಅಟ್ಯಾಚಮೆಂಟ ವಗ್ಯೆರೆ ಇದ್ದರೇ, ಅಂಥವರು ಇಂದಿನಿಂದ ಏಳು (7) ದಿನಗಳಲ್ಲಿ ಲಿಖಿತವಾಗಿ ಮತ್ತು ಆಧಾರ ಸಹಿತವಾಗಿ ನನ್ನ ವಿಳಾಸಕ್ಕೆ ತಿಳಿಸಬೇಕು.

ಸ್ಥಳ: ವಿಜಯಪುರ
ದಿನಾಂಕ : 12.10.2026
ಸಹಿ/- ಆರ್. ಟಿ. ಬುಲಗೌಡ
ವಕೀಲರು, ಕೆಎಆರ್: 1375/2002.
ಅಂಗಡಿ ನಂ. 2, ಪಿ.ಆಯ್. ಶಿರೂರ ಕಾಂಪ್ಲೆಕ್ಸ್, ಎಸ್.ಎಸ್. ಹಾಯಸ್ಕೂಲ ಹತ್ತೀರ, ಲಿಂಗದ ಗುಡಿ ರಸ್ತೆ, ವಿಜಯಪೂರ-586101
ಮೋ. ನಂ. 9845479099/8618406882.

ಬಜಾಜ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್
BAJAJ HOUSING FINANCE
ಕಾರ್ಪೊರೇಟ್ ಕಚೇರಿ: ಸೆರೆಬ್ರಮ್, ಐಟಿ ಪಾರ್ಕ್, ಬಿ2 ಕಟ್ಟಡ, 5ನೇ ಮಹಡಿ, ಕಲ್ಯಾಣಿ ನಗರ್, ಪುಣೆ, ಮಹಾರಾಷ್ಟ್ರ- 411014, ಶಾಖಾ ಕಛೇರಿ: ಶಿವಂ ಕಾಂಪ್ಲೆಕ್ಸ್, 2ನೇ ಮಹಡಿ, 979, ಗುರುಕುಲ್ ರಸ್ತೆ, ಕ್ಲಾಯಿ ವರ್ಲ್ಡ್ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಈ ಮೇಲ್ಗಡೆ ಬಿಜಾಪುರ - 586101.

ಸ್ವಾಧೀನ ಸೂಚನೆ

2002ರ ಹಣಕಾಸು ಆಸ್ತಿಗಳ ಭದ್ರತೆ ಹಾಗೂ ಪುನರ್ ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ಕಾಯಿದೆ ಕಲಂ ಯು/ಎಸ್13(4)ರಡಿ, 2002ರ ಭದ್ರತಾ ಹಿತಾಸಕ್ತಿ ಜಾರಿ ನಿಯಮಗಳ ನಿಯಮ 8-(1) (ಅಪೆಂಡಿಕ್ಸ್-IV)

ಆದಾಗ್ಯೂ, ಮೆ॥ ಬಜಾಜ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (ಬಿಹೆಚ್‌ಎಫ್‌ಎಲ್)ನ ಅಧಿಕೃತ ಅಧಿಕಾರಿಯಾಗಿ ಮತ್ತು 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 3ರ ಜೊತೆಗೆ ಓದಿಕೊಳ್ಳಬೇಕಾದ ಕಲಂ 13(2) ರಡಿ ಪ್ರದತ್ತವಾದ ಅಧಿಕಾರಗಳಂತೆ ಕೆಳಕಂಡಂತೆ ತಿಳಿಸಲಾದ ಸಾಲಗಾರರು/ಸಹ-ಸಾಲಗಾರರು/ಜಾಮೀನುದಾರ(ರು)ಗಳಿಗೆ ಡಿಮಾಂಡ್ ನೋಟೀಸ್(ಗಳು) ಜಾರಿಮಾಡಿ ಸದರಿ ನೋಟೀಸ್ ಸ್ವೀಕರಿಸಿದ 60 ದಿನಗಳ ಒಳಗಾಗಿ ನೋಟೀಸ್‌ನಲ್ಲಿ ನಮೂದಿಸಲಾದ ಮೊತ್ತವನ್ನು ಮರುಪಾವತಿ ಮಾಡಲು ಸೂಚಿಸಿದ್ದರು. ಸಾಲಗಾರ(ರು) ಸಹ-ಸಾಲಗಾರ(ರು) ಜಾಮೀನುದಾರ(ರು)ಗಳಿಗೆ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಸೂಚನೆ (ನೋಟೀಸ್) ನೀಡುವುದೇನೆಂದರೆ ಮೆ॥ ಬಜಾಜ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಪರವಾಗಿ ಕೆಳಸಹಿದಾರರು ಅವರಿಗೆ ಸದರಿ ನಿಯಮಗಳ ನಿಯಮ 8-(1)ರೊಡನೆ ಓದಿಕೊಳ್ಳಬೇಕಾದ ಕಾಯಿದೆಯ ಕಲಂ 13(4)ರಡಿ ಪ್ರದತ್ತವಾದ ಅಧಿಕಾರಗಳಂತೆ ಕೆಳಕಂಡಂತೆ ವಿವರಿಸಲಾದ ಆಸ್ತಿಗಳ **ಸ್ವಾಧೀನತೆಯನ್ನು ಪಡೆದುಕೊಂಡಿರುತ್ತಾರೆ.** ಸಾಲಗಾರ(ರು) ಸಹ-ಸಾಲಗಾರ(ರು) ಜಾಮೀನುದಾರ(ರು)ಗಳಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಎಚ್ಚರಿಕೆ ನೀಡುವುದೇನೆಂದರೆ ಸದರಿ ಆಸ್ತಿಯೊಡನೆ ಯಾರೂ ಯಾರ ಜೊತೆಗೂ ವ್ಯವಹರಿಸಬಾರದು ವ್ಯವಹರಿಸಿದ್ದೇ ಆದರೆ ಆಸ್ತಿಯ ಫಸ್ಟ್ ಚಾರ್ಜ್ ಬಿಹೆಚ್‌ಎಫ್‌ಎಲ್‌ಗೆ ಬಾಕಿಯಾಗಿರುವ ಕೆಳಕಂಡಂತೆ ವಿವರಿಸಲಾದ ಮೊಬಲಗು(ಗಳಿಗೆ) ಮತ್ತು ತದನಂತರದ ಬಡ್ಡಿ ಸೇರಿದ ಮೊತ್ತಕ್ಕೆ ಭಾದ್ಯರಾಗಬೇಕಾಗುತ್ತದೆ.

ಸಾಲಗಾರ(ರು)/ ಜಾಮೀನುದಾರ(ರು) ಹೆಸರು (LAN ಸಂ. ಶಾಖೆಯ ಹೆಸರು)	ಭದ್ರತಾ ಆಸ್ತಿಯ ವಿವರ (ಸ್ಥಿರಾಸ್ತಿ)	ಡಿಮಾಂಡ್ ನೋಟೀಸ್ ದಿನಾಂಕ ಮತ್ತು ಮೊತ್ತ	ಸ್ವಾಧೀನತೆಯ ದಿನಾಂಕ
ಶಾಖೆ: ಬಿಜಾಪುರ, LAN: 4B1RMS0100583642, 1. ನಬಿರಸುಲ್ ಕಾವಲ್ (ಸಾಲಗಾರರು), ಮುರುಜ್‌ಸಾಬ್ ರವರ ಮಗ ಕಾವಲ್ ದಖಾನಿ ಇಡಗ, ಬಿಜಾಪುರ, ಬಿಜಾಪುರ-586101. ಅಲ್ಲದೇ: ಸಿಟಿಎಸ್ ಸಂ. 1287/4ಇ, ವಾರ್ಡ್ ಸಂ. 6, ಜೈ ಕರ್ನಾಟಕ ಕಾಲೋನಿ, ಸಿಂದಗಿ ನಾಕಾ, ತಾ ಜಿಲ್ಲೆ ಬೀಜಾಪುರ ಕರ್ನಾಟಕ - 586101. 2. ಜೈತುನಬಿ ಕಾವಲ್ (ಸಹ- ಸಾಲಗಾರರು), ನಬಿರಸುಲ್‌ರವರ ಪತ್ನಿ, ವಾರ್ಡ್ ಸಂ. 07, ದಖಾನಿ ಇಡಗ, ಬಿಜಾಪುರ, ಬಿಜಾಪುರ- 586101.	**ಷೆಡ್ಯೂಲ್ ಆಸ್ತಿ:** ಸಕಲ ಸಮಸ್ತವೂ ಸೇರಿದಂತೆ ಕೃಷಿಯೇತರ ಆಸ್ತಿ ವಿವರ: ಸಿಟಿಎಸ್ ಸಂ. 1287/4ಇ, ವಾರ್ಡ್ ಸಂ. 6, ಜೈ ಕರ್ನಾಟಕ ಕಾಲೋನಿ, ಸಿಂದಗಿ ನಾಕ ಹತ್ತಿರ, ತಾ. ಜಿಲ್ಲೆ ಬಿಜಾಪುರ್, ಕರ್ನಾಟಕ- 586101. ಅಳತೆ: 133.3/9 ಚದರ ಗಜ, ಸಿಟಿಸಿ ವಾರ್ಡ್ ಸಂ. VI, ವಿಜಯಪುರ- 586101. ಪೂರ್ವ- ಪಶ್ಚಿಮ 40 ಅಡಿ* ಉತ್ತರ- ದಕ್ಷಿಣ 30 ಅಡಿ, **ಪೂರ್ವಕ್ಕೆ:** ರಸ್ತೆ, **ಪಶ್ಚಿಮಕ್ಕೆ:** ಸಿಟಿಎಸ್ ಸಂ. 1287/3, **ಉತ್ತರಕ್ಕೆ:** ಸಿಟಿಸಿ ಸಂ. 1287/ಡಿ, **ದಕ್ಷಿಣಕ್ಕೆ:** ರಸ್ತೆ.	**21ನೇ ಜುಲೈ 2026 ರೂ. 3,92,734/-** (ಮೂರು ಲಕ್ಷದ ತೊಂಭತ್ತೆರಡು ಸಾವಿರದ ಏಳುನೂರ ಮೂವತ್ತನಾಲ್ಕು ರೂ. ಗಳು ಮಾತ್ರ)	07 ಅಕ್ಟೋಬರ್ 2026

ಸಾಂಕೇತಿಕ ಸ್ವಾಧೀನತೆಯ ದಿನಾಂಕ: 07-ಅಕ್ಟೋಬರ್ -2026, ಸ್ಥಳ: ಬಿಜಾಪುರ
ಸಹಿ/- ಅಧಿಕೃತ ಅಧಿಕಾರಿ, ಬಜಾಜ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

ಬ್ಯಾಂಕ್ ಆಫ್ ಬರೋಡ
बैंक ऑफ़ बड़ौदा
Bank of Baroda

ಬ್ಯಾಂಕ್ ಆಫ್ ಬರೋಡಾ, ತುರುವೇಕೆರೆ ಶಾಖೆ,
ಎಸ್ ಎಲ್ ಕಾಂಪ್ಲೆಕ್ಸ್, ಇಂದಿರಾನಗರ 4ನೇ ಅಡ್ಡರಸ್ತೆ,
ಎದುರು ತಾಲ್ಲೂಕು ಪಂಚಾಯಿತಿ ಕಚೇರಿ, ತುರುವೇಕೆರೆ-572227
ದೂರವಾಣಿ: 9901854428, ಇ-ಮೇಲ್: vjturu@bankofbaroda.com
ವೆಬ್‌ಸೈಟ್: www.bankofbaroda.com

ಆಸ್ತಿಗಳ ಮಾರಾಟದ ಸೂಚನೆ
ಅನುಬಂಧ-IV-A [ನಿಯಮ 6 (2) ಮತ್ತು 8 (6) ರ ನಿಬಂಧನೆಯನು ನೋಡಿ]

ಇ-ಹರಾಜು ಮಾರಾಟ ಪ್ರಕಟಣೆ ನಿಯಮ 6(2) & 8(6) ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002 ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್ ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಸ್ಟ್ ಅಂಡ್ ಎನ್‌ಫೋರ್ಸ್ ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ರಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ. ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ / ಜಾಮೀನುದಾರರಿಗೆ ಹಾಗೂ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರ್‌ಗೆ ಅಡಮಾನ / ಚಾರ್ಜ್ ಮಾಡಿರುವ ಈ ಕೆಳಗೆ ಸೂಚಿಸಿರುವ ಆಸ್ತಿಗಳ ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ ಇವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು, " ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ ಆಧಾರದ ಮೇಲೆ" ಮಾರಾಟ ಮಾಡಲಾಗುವುದು. ಶಾಖೆ/ ಸಾಲಗಾರರ / ಜಾಮೀನುದಾರರ /

ಕ್ರ. ಸಂ	ಸಾಲಗಾರ/ರು/ಖಾತರಿದಾರರು/ರು/ ಮಾಲೀಕರು(ರು) ಹೆಸರು ಮತ್ತು ವಿಳಾಸ	ತಿಳಿದಿರುವ ಋಣಭಾರಗಳನ್ನು ಹೊಂದಿರುವ ಸ್ಥಿರ/ಚರ ಆಸ್ತಿಯ ವಿವರವಾದ ವಿವರಣೆ, ಯಾವುದಾದರೂ ಇದ್ದರೆ (ಮಾಲೀಕರು/ ಅಡಮಾನದಾರರ ಹೆಸರು: ಶ್ರೀ ಅನಿಲ್ ಜಯಚಂದ್ ಚವಾಣ್)	ಒಟ್ಟು ಖರ್ಚುಗಳು	ಇ-ಹರಾಜಿನ ದಿನಾಂಕ ಮತ್ತು ಸಮಯ	ಮೀಸಲು ಬೆಲೆ, ಇಎಂಡಿ, ಇಎಂಡಿ ಮೊತ್ತದ ಕೊನೆಯ ದಿನಾಂಕ ಮತ್ತು ಬಿಡ್ ಹೆಚ್ಚಳ ಮೊತ್ತ	ಸ್ವಾಧೀನದ ಸ್ಥಿತಿ	ಆಸ್ತಿ ತಪಾಸಣೆ ದಿನಾಂಕ ಮತ್ತು ಸಮಯ
01 02	**ಶ್ರೀ ಅನಿಲ್ ಚವಾಣ್ ಜೆ ಬಿನ್ ಜಂಯುಚಂದ್ ಚವಾಣ್, ಕೆಹೆಚ್‌ಬಿ ಕಾಲೋನಿ, ಮನೆ ನಂ. 35, ಎನ್ ಹೆಚ್ ರಸ್ತೆ, ಬಿಜಾಪುರ -586101.** **ಶ್ರೀಮತಿ ಸವಿತಾ ಚವಾಣ್ ಕೋಂ ಶ್ರೀ ಅನಿಲ್ ಚವಾಣ್ ಜೆ, ಕೆಹೆಚ್‌ಬಿ ಕಾಲೋನಿ, ಮನೆ ಸಂಖ್ಯೆ35, ಎನ್.ಎಚ್ ರಸ್ತೆ, ಬಿಜಾಪುರ -586101.**	ವಸತಿ ಮನೆ: ಸರ್ವೆ ಸಂಖ್ಯೆ 99/1, MIG-1, ಪ್ಲಾಟ್ ಸಂಖ್ಯೆ 22, ಪೂರ್ವದಿಂದ ಪಶ್ಚಿಮಕ್ಕೆ 30 ಅಡಿ, ಉತ್ತರದಿಂದ ದಕ್ಷಿಣಕ್ಕೆ 50 ಅಡಿ ಅಳತೆ. ಇದು MIG-1, ಹುಂಡೇಕರ್ ಪೆಟ್ರೋಲ್ ಪಂಪ್ ಹತ್ತಿರ, ಉದಯ ನಗರ, KHB ಕಾಲೋನಿ, ಸೋಲಾಪುರ ಬೈ-ಪಾಸ್ ರಸ್ತೆ, ವಿಜಯಪುರ-586101ನಲ್ಲಿದೆ. ಇದರ **ಗಡಿಗಳು: ಪೂರ್ವ:** ಮನೆ ನಂ. 23, **ಪಶ್ಚಿಮ:** ರಸ್ತೆ, **ಉತ್ತರ:** MIG 34, **ದಕ್ಷಿಣ:** ರಸ್ತೆ.	**ರೂ. 41,76,151/- (30.06.2021 ರಂತೆ O/S)** + ಬಡ್ಡಿ ಮತ್ತು ಎಲ್ಲಾ ಇತರ ಶುಲ್ಕಗಳು ಒಪ್ಪಂದದ ದರದಲ್ಲಿ ಪಾವತಿ ದಿನಾಂಕದವರೆಗಿನ ವೆಚ್ಚಗಳು ಮತ್ತು ವೆಚ್ಚಗಳು.	**16-11-2026** ರಂದು ಮಧ್ಯಾಹ್ನ **2:00** ರಿಂದ ಸಂಜೆ **6:00** ರವರೆಗೆ	ಮೀಸಲು ಬೆಲೆ: ರೂ. **1,12,35,000/-** ಇಎಂಡಿ: ರೂ. **11,23,500/-** ಇಎಂಡಿ ಮೊತ್ತವನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **16-11-2026** ಸಂಜೆ **2:00** ಗಂಟೆಯೊಳಗೆ ಬಿಡ್ ಹೆಚ್ಚಳ ಮೊತ್ತ: ರೂ. **25,000/-**	ಸಾಂಕೇತಿಕ ಸ್ವಾಧೀನ	ಅಧಿಕೃತ ಅಧಿಕಾರಿಯಿಂದ ಪೂರ್ವ ನೇಮಕಾತಿ ಯೊಂದಿಗೆ

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು **https://www.bankofbaroda.in/e-auction** ವೆಬ್‌ಸೈಟ್ ಲಿಂಕ್ ಮತ್ತು ಆನ್‌ಲೈನ್ ಹರಾಜು ಪೋರ್ಟಲ್ **https://Baanknet.com** ಅನ್ನು ನೋಡಿ/ಭೇಟಿ ನೀಡಿ. ಆಸ್ತಿ ತೆರಿಗೆ, ಇ-ಖಾತಾ ಶುಲ್ಕಗಳು, ಸೊಸೈಟಿಯ ನಿರ್ವಹಣಾ ಶುಲ್ಕಗಳು, ವಿದ್ಯುತ್ ಶುಲ್ಕಗಳು ಮತ್ತು ಅತಿ ಹೆಚ್ಚು ಬಿಡ್ದಾರರು ವಿಧಿಸಬೇಕಾದ ಯಾವುದೇ ಇತರ ಕಾನೂನು ಶುಲ್ಕಗಳಿಗೆ ಸಂಬಂಧಿಸಿದ ಬಾಕಿ ಶುಲ್ಕಗಳು. "ಅಲ್ಲದೆ, ಸಂಭಾವ್ಯ ಬಿಡ್ದಾರರು ಅಧಿಕೃತ ಅಧಿಕಾರಿಯನ್ನು ಸಂಪರ್ಕಿಸಬಹುದು ವಿಚಾರಣೆಗಳಿಗಾಗಿ **ಮೊಬೈಲ್: 9901854428,** ಮತ್ತು **ಇಮೇಲ್ ಐಡಿ: support.BAANKNET@psballiance.com**

ದಿನಾಂಕ: 12-10-2026
ಸ್ಥಳ: ಬೆಂಗಳೂರು
ಮುಖ್ಯ ವ್ಯವಸ್ಥಾಪಕರು (ಅಧಿಕೃತ ಅಧಿಕಾರಿ) ಶಾಖೆ ಮುಖ್ಯಸ್ಥರು,
ಬೆಂಗಳೂರು ಗ್ರಾಮಾಂತರ ಪ್ರದೇಶ